ಈ) ಕಾಮಗಾರಿ ಮುಕ್ತಾಯ ಅದನಂತರ ಕಾಮಗಾರಿ ಕೆಲಸ ತೃಪ್ತಿಕರವಾಗಿದೆ ಎಂದು ಮೇಲೆ ಉಲ್ಲೇಖಿಸಿದ ಸಮಿತಿಗಳಿಂದ ಲಿಖಿತವಾಗಿ ಪತ್ರ ಪಡೆಯಲಾಗಿದೆಯೇ?

ಉ) ಇನ್ನು ಮುಂದೆ ಇದನ್ನು ಕಟ್ಟು ನಿಟ್ಟಾಗಿ ಕಾರ್ಯರೂಪಕ್ಕೆ ತರಲಾಗುವುದೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ರೂ. 24.55 ಲಕ್ಷಗಳು.

ಆ)

		(ರೂ. ಲಕ್ಷಗಳಲ್ಲಿ)		
		1994-95	1995-96	1996-97
1)	ಶಿಕ್ಷಣ ಇಲಾಖಾ ಅನುದಾನ	2.79	8.35	7.75
2)	ಜಿಲ್ಲಾಧಿಕಾರಿಗಳ ಪ್ರಕೃತಿವಿಕೋಪ ಪರಿಹಾರ	2.30	-	-
3)	ಗಡಿ ಪ್ರದೇಶಾಭಿವೃದ್ಧಿ ಯೋಜನೆ	-	2.94	-
4)	ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ಅನುದಾನ	-	0.42	-
	ಒಟ್ಟು	**5.09**	**11.71**	**7.75**

ಇ) ಹೌದು.

ಈ) ಹೌದು.

ಉ) ಹೌದು.

ಮಂಗಳೂರು ಜ್ಞಾನೋದಯ ಸರ್ಕಾರಿ ಪ್ರೌಢಶಾಲೆಯ ಕಟ್ಟಡ ದುರಸ್ಥಿ

2928 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಹ್ಯೂಗೆ ಬಜಾರ್ ಸರ್ಕಾರಿ ಪ್ರೌಢಶಾಲೆಗೆ (ಜ್ಞಾನೋದಯ) ಕೊಠಡಿಗಳ ಕಿಟಕಿ ಬಾಗಿಲುಗಳು ಮುರಿದುಬಿದ್ದಿದ್ದು, ಕಾಂಪೌಂಡು ಗೋಡೆ ಬಿದ್ದಿದ್ದು, ಮೂಲಭೂತ ಸೌಕರ್ಯಗಳಿಂದ ಅಧ್ಯಾಪಕರ ಕೊರತೆಯಿಂದ ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಯಾವಾಗ ಸರಿಪಡಿಸಲಾಗುವುದು?

ಇ) ಅದೇ ರೀತಿ ಮಂಗಳೂರಿನ ಅಶೋಕನಗರ, ಗಾಂಧಿನಗರ, ಪಾಂಡೇಶ್ವರ, ನಿರೇಶ್ವಲ್ಯ, ಬೊಕ್ಕಪಟ್ಟಣ, ಕದ್ರಿಮಲ್ಲಿಕಟ್ಟೆ, ಕಾಪಿಕಾಡು ಬಂದರು ಬಹಲಕೇರಿ ಇತ್ಯಾದಿ ಕಡೆಯಲ್ಲಿರುವ ಸರ್ಕಾರಿ ಶಾಲೆಗಳ ಮೂಲಭೂತ ಸೌಕರ್ಯಗಳ ಕೊರತೆ, ಅಧ್ಯಾಪಕರ ಕೊರತೆ, ಪೀಠೋಪಕರಣಗಳ ಕೊರತೆ, ಕ್ರೀಡಾ ಸಾಮಗ್ರಿಗಳ ಕೊರತೆ ನೀಗಿಸಲು ಹಾಗೂ ಶಾಲಾಭಿವೃದ್ಧಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) ಈ ಶಾಲೆಯ ಕೊಠಡಿಗಳ ಕಿಟಿಕಿ ಬಾಗಿಲುಗಳು ಹಾಗೂ ಕಾಂಪೌಂಡ್ ಗೋಡೆ ಮುರಿದು ಬಿದ್ದಿರುವುದು ನಿಜ. ಆದರೆ ಶಿಕ್ಷಕರ ಕೊರತೆಯಿಲ್ಲ.

ಆ) ಪ್ರಸಕ್ತ ಸಾಲಿನಲ್ಲಿ ಸರಿಪಡಿಸಲಾಗುವುದು.

ಇ) ಬೊಕ್ಕಪಟ್ಟಣ, ಕಾಪಿಕಾಡು, ಬಂದರು ಶಾಲೆಯಲ್ಲಿ ಖಾಲಿ ಹುದ್ದೆಗಳಿರುವುದಿಲ್ಲ. ಉಳಿದಂತೆ ಮಂಗಳೂರು ನಗರದೊಳಗಿನ ಖಾಲಿ ಹುದ್ದೆಗಳನ್ನು ಮುಂದೆ ತುಂಬಲಾಗುವುದು. ಎಲ್ಲಾ ಶಾಲೆಗಳಿಗೆ ಪ್ರಾಯೋಜಿತ ಕಪ್ಪು ಹಲಗೆ ಕಾರ್ಯಕ್ರಮದಡಿ ತಲಾ ರೂ. 50,000-00 ಪ್ರಕಾರ ಪೀಠೋಪಕರಣ, ವಿಜ್ಞಾನ ಸಾಮಗ್ರಿ, ಪುಸ್ತಕ ಆಟದ ಸಾಮಗ್ರಿ, ಕಲಿಕಾ ಸಾಮಗ್ರಿಗಳನ್ನು ಸರಬರಾಜು ಮಾಡಿದ್ದು, 1997-98ನೇ ಸಾಲಿನಲ್ಲಿಯೂ ಸಹ ಸದರಿ ಎಲ್ಲಾ ಸಾಮಗ್ರಿಗಳನ್ನು ಸರಬರಾಜು, ಮಾಡಲು ಯೋಜನೆಯಡಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ.

ಮಂಗಳೂರಿನಲ್ಲಿ ಗ್ರಂಥಾಲಯಗಳನ್ನು ಆಧುನೀಕರಣಗೊಳಿಸುವುದು

2929 - ಶ್ರೀ ಎಸ್. ಯೋಗಿಶ್‌ಭಟ್ (ಮಂಗಳೂರು) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಕ್ಷೇತ್ರದಲ್ಲಿ ಈಗಿರುವ ಲೈಬ್ರರಿ ಕಟ್ಟಡಗಳನ್ನು ಅಭಿವೃದ್ಧಿಗೊಳಿಸಲು, ಆಧುನಿಕ ತಂತ್ರಜ್ಞಾನದ ಮಾಹಿತಿಯನ್ನು (ಇಂಟರ್‌ನೆಟ್) ವಾಚನಾಲಯದ ವ್ಯವಸ್ಥೆ, ಸಂಚಾರಿ ಲೈಬ್ರರಿಯನ್ನು ಅಭಿವೃದ್ಧಿಗೊಳಿಸಲು ಸಿಬ್ಬಂದಿಗಳ ನೇಮಕಾತಿಗಾಗಿ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಆ) ಎಷ್ಟು ಅನುದಾನ ಬಿಡುಗಡೆ ಮಾಡಲಾಗುವುದು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ಮಂಗಳೂರು ಕ್ಷೇತ್ರದಲ್ಲಿ ಈಗಿರುವ ಗ್ರಂಥಾಲಯ ಕಟ್ಟಡಗಳಲ್ಲಿ, ಒಂದು, ಸ್ವಂತ ಕಟ್ಟಡವಾಗಿದ್ದು, 6 ನಗರ ಸಭೆ ಕಟ್ಟಡಗಳಾಗಿರುತ್ತದೆ. ನಗರ ಸಭೆ ಕಟ್ಟಡಗಳು ಸಂಪೂರ್ಣವಾಗಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ವಹಿಸಿಕೊಟ್ಟಲ್ಲಿ ಉತ್ತಮ ಸ್ಥಿತಿಯಲ್ಲಿ ಅಭವೃದ್ಧಿಗೊಳಿಸಲಾಗುವುದು.